# ಹೊಸಹಳ್ಳಿ ವಾರ್ಡ್ ಸಂಖ್ಯೆ: 124 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮಹಳ್ಳಿ) ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ: 05.12.2020 ರಂದು ವಾರ್ಡ್ ಸಂಖ್ಯೆ: 124 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ರಾಮಕೃಷ್ಣ ಅಧ್ಯಕ್ಷರು ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ರವಿವರ್ಮ ಸ.ಕಾ.ನಿ.ಅ | ಸದಸ್ಯರು. |
| 3. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 4. | ಶ್ರೀ. ಅಂಬರೀಶ್ (ಆರೋಗ್ಯ ಪರಿವೀಕ್ಷರು) | ಸದಸ್ಯರು. |
| 5. | ಶ್ರೀ. ತಿಮ್ಮಪ್ಪ ತೋಟಗಾರಿಕೆ ಇಲಾಖೆ | ಸದಸ್ಯರು. |
| 6. | ಶ್ರೀ. ಉಮಾಪತಿ ಬಿ.ಬಿ.ಎಂ.ಪಿ | ಸದಸ್ಯರು. |

ದಿನಾಂಕ: 05.12.2020 ರಂದು ಬೆಳಗ್ಗೆ 10.00 ಘಂಟೆಗೆ ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮಹಳ್ಳಿ) ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ರಾಮಕೃಷ್ಣ (ಜೆ.ಸಿ ಬೊಮ್ಮಹಳ್ಳಿ) ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

ಹಿಂದಿನ ಸಭೆಯ ನಡವಳಿಗಳ ಅಂಶಗಳನ್ನು ಚರ್ಚಿಸಿ ಪಾಲನೆಯಾಗದ ಕಾಮಗಾರಿಗಳ/ದುರಸ್ಥಿಯನ್ನು ಮುಂದುವರೆಸಲು ಅಧ್ಯಕ್ಷರು ಸಭೆಗೆ ಸೂಚಿಸಿದರು.

ರಸ್ತೆಯ ಡಾಂಬರು ಕಾಮಗಾರಿಯ ಬಗ್ಗೆ ಚರ್ಚಿಸಿ ಗುತ್ತಿಗೆದಾರಾದ ಶ್ರೀ.ಚಂದ್ರನಾಯ್ಕ ರವರಿಗೆ ದೂರವಾಣಿ ಮೂಲಕ ತಿಳಿಸಲಾಗಿ ಅತಿ ಶೀಘ್ರದಲ್ಲಿ ಕಾಮಗಾರಿ ಪಾರಂಭಿಸುವುದಾಗಿ ತಿಳಿಸಿ ಮಾಹಿತಿಯನ್ನು ಸಭೆಗೆ ಕಾರ್ಯದರ್ಶಿ ರವರು ತಿಳಿಸಿದರು.

ಹೊಸಹಳ್ಳಿಯಲ್ಲಿ Manhole Chamber ಹೊಡೆದಿದ್ದು ಅದನ್ನು ಚರ್ಚಿಸಿ ಸೋಮವಾರದಿಂದ ಕಾಮಗಾರಿ ಪಾರಂಭಿಸುವುದಾಗಿ ತಿಳಿಸಿ ಮಾಹಿತಿಯನ್ನು ಸಭೆಗೆ ಕಾರ್ಯದರ್ಶಿ ರವರು ತಿಳಿಸಿದರು.

4ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಸರಾಗವಾಗಿ ಬರೆದೆ ತೊಂದರೆಯಾಗಿರುವುದನ್ನು ಅತಿ ಶೀಘ್ರವಾಗಿ ಸರಿ ಪಡಿಸಿಕೊಡಬೇಕೆಂದು ಅಧ್ಯಕ್ಷರು ಸ.ಅ (BWSSB) ರವರಿಗೆ ಸೂಚಿಸಿದರು.

ಮುಖ್ಯ ಕೊಳವೆಗಳನ್ನು ಹಾಗೂ ನೀರಿನ ಕೊಳವೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಧ್ಯಕ್ಷರುಸೂಚಿಸಿದರು. ಪ್ರತಿದಿನ ರಾತ್ರಿ 2.00 ಗಂಟೆಗೆ ಬಿಡುತ್ತಿರುವ ನೀರನ್ನು ಇನ್ನು ಮುಂದೆ 8.00 ರಿಂದ 9.00 ಗಂಟೆಯ ಒಳಗೆ ಬಿಡಲು ಅಧ್ಯಕ್ಷರು ಸೂಚಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 05.12.2020

5/12/2020.

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 124.